ತಪ್ಪಿದ್ದಲ್ಲಿ ತಿದ್ದಿ, ಯಾವುದಾದರೂ ಭಾಗ ಬೇಡ ಅನ್ನಿಸಿದರೆ ತೆಗೆಯೋಣ ಹೇಳಿ ಅಂದೆ. ಆ ಪುಸ್ತಕದ ಬರವಣಿಗೆ ಬಹಳ ಖುಷಿ ಕೊಟ್ಟಿತು. ಅದೊಂದು ಬಹಳ ಶ್ರೀಮಂತವಾದ ಅನುಭವ.

◆ **ದೃಶ್ಯಮಾಧ್ಯಮದಲ್ಲಿನ ಕೆಲಸದ ಅನುಭವಗಳ ಬಗ್ಗೆ...**

ಒಂದೆರೆಡು ಮಕ್ಕಳ ನಾಟಕ ಮಾಡಿಸಿದ್ದೆ. ಮೋಹನ್ ರಾಕೇಶ್ ಅವರ 'ಅಂಡೆ ಕೆ ಚಿಲ್ಕೆ' ಅಂತ ಹಾಸ್ಯ ನಾಟಕ ಇದೆ. ಅದನ್ನು ಕನ್ನಡಕ್ಕೆ ಮಾಡಿದ್ದೆ. ಅದರ ಸುಮಾರು ಪ್ರಯೋಗಗಳಾದವು. ಜಾಹೀರಾತು ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರಿಂದ ಅಡ್ವರ್ಟೈಸಿಂಗ್ ಕಮರ್ಷಿಯಲ್‌ಗಳಿಗೆ ಕೂಡ ಸ್ಕ್ರಿಪ್ಟ್ ಬರೀತಿದ್ದೆ. ಅವುಗಳ ಶೂಟಿಂಗ್, ರೆಕಾರ್ಡಿಂಗ್ ಆಗೋವಾಗ ಅದರ ಸೂಪರ್‌ವಿಶನ್‌ಗೆ ಹೋಗಬೇಕಾಗಿತ್ತು. ಈ ಅಡ್ವರ್ಟೈಸಿಂಗ್ ಜಿಂಗಲ್‌ಗಳು ಕೆಲವು ಕನ್ನಡದಲ್ಲೂ ಮಾಡಿದಿನಿ. ಫಿಲ್ಮ್ ಇನ್ಸ್‌ಟ್ಯೂಟ್ ಇಂಡಿಯಾನವರು ಕೆಲವು ಫಿಲ್ಮ್ ಅಪ್ರಿಸಿಯೇಶನ್ ಕೋರ್ಸ್‌ಗಳನ್ನು ಪ್ರಭಾತ್ ಫಿಲ್ಮ್ ಸೊಸೈಟಿಯಲ್ಲಿ ಮಾಡಿದ್ದರು. ಅವುಗಳಿಗೆಲ್ಲ ಹೋಗಿದ್ದೆ.

ಬೆಂಗಳೂರಿಗೆ ಬಂದ ಮೇಲೆ ಈಟಿವಿಗೆ 'ಪಂಚಮಿ ಅಂತ ಒಂದು ಕಾರ್ಯಕ್ರಮ ಮಾಡಿಕೊಟ್ಟಿದ್ದೆ. ಕಾರ್ಯಕ್ರಮ ರೂಪಿಸಿ ಅದರ ನಿರೂಪಣೆ ಕೂಡ ಮಾಡಿದ್ದೆ. Social issues ಕುರಿತಾದ ಕಾರ್ಯಕ್ರಮ ಅದು. ಸುಮಾರು 40–50 ಎಪಿಸೋಡ್‌ಗಳಲ್ಲಿ ಪ್ರಸಾರವಾಯಿತು. ಈಟಿವಿಯಲ್ಲಿ ಪಿ.ಎಚ್. ವಿಶ್ವನಾಥ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿದ್ದ 'ಪ್ರೇಮಕತೆಗಳು' ಧಾರಾವಾಹಿಗೆ ಚಿತ್ರಕತೆ, ಸಂಭಾಷಣೆ ಬರೆದಿದ್ದೆ. ಅದೇ ತರಹ ಕೆಲವು ಟೆಲಿ ಫಿಲ್ಮ್ ಕೂಡ ಮಾಡಿದೆ. ಹಿಂದಿಯ 'ಕಶ್ಮಕಶ್' ಅನ್ನೋ ಧಾರಾವಾಹಿಯಲ್ಲಿ, 'ಸಮಾಗಮ' ಧಾರಾವಾಹಿಯಲ್ಲಿ ಅಭಿನಯಿಸಿದಿನಿ. ಟಿ.ಎನ್. ಸೀತಾರಾಂ ಅವರ 'ಮಿಂಚು'ಗೆ ಕತೆ ಬರೆದುಕೊಟ್ಟಿದ್ದೆ.

◆ **ಒಂದು ವೇಳೆ ಲೇಖಕಿಯಾಗದೇ ಹೋಗಿದ್ದರೆ..**

ನಂಗೆ ಆಟಗಳೆಂದರೆ ಬಹಳ ಇಷ್ಟ. ಬ್ಯಾಡ್ಮಿಂಟನ್ ಮೊದಲಿಂದಲೂ ಬರುತ್ತಿತ್ತು. ಮುಂಬೈಗೆ ಹೋದಮೇಲೆ ಟೆನಿಸ್ ಕಲಿತೆ. ಟೆನಿಸ್ ಬಹಳ ಇಷ್ಟ. ಮುಂಬೈ ಬಿಡುವವರೆಗೂ ರೆಗ್ಯುಲರ್ ಆಗಿ ಟೆನಿಸ್ ಆಡ್ತಾ ಇದ್ದೆವು. ನಾವಿದ್ದ ಕಡೆ ಒಳ್ಳೆ ಸೌಲಭ್ಯಗಳು ಇದ್ದವು. ಬಹುಶಃ ಅವಕಾಶ ಸಿಕ್ಕಿದ್ದರೆ ಕ್ರೀಡಾ ಪಟು ಆಗಿರುತ್ತಿದ್ದೆ.

**ಚಿತ್ರಗಳು: ಕಿಶೋರ್ ಕುಮಾರ್**




**ಹೇಮಾ ಎಸ್**

ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ. ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲವು ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಇಂಗ್ಲಿಷ್ ಹಾಗೂ ಹಿಂದಿಯಿಂದ ಲೇಖನ, ಕತೆ ಹಾಗೂ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಹಿತ್ಯ ಓದು ಹಾಗೂ ಅನುವಾದ ಹವ್ಯಾಸಗಳು. ಪ್ರಕಟಿತ ಕೃತಿಗಳು: 'ಹೆಸರಿಲ್ಲದ ಹೂ' (ಅಬ್ಬಾಸ್ ಕಿರಸ್ತೊಮಿ ಕವನಗಳ ಅನುವಾದ) ಮತ್ತು 'ಉರಿವ ಬನದ ಕೋಗಿಲೆಗಳು' (ಅನುವಾದಿತ ಲೇಖನಗಳ ಸಂಗ್ರಹ). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.